ಬೇರೆ ಬೇರೆ ಕಡೆ ಚದುರಿದ್ದರು. ತಂದೆಯ ಬಳುವಳಿಯನ್ನು ಮುಂದುವರೆಸಿದ ವೀರಪ್ಪನವರು ಕೆ.ಬಿ.ಆರ್. ನಾಟಕ ಮಂಡಲಿಯ ಆರಂಭಕ್ಕೆ ಚಾಲನೆ ಕೊಟ್ಟಿದ್ದರು.

ಅಣ್ಣನ ಕಂಪೆನಿಯ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ ಲೀಲಾ ಜನಪ್ರಿಯ ನಾಯಕಿ ಎನ್ನಿಸಿಕೊಂಡಿದ್ದರು. 'ಹಳ್ಳಿ ಹುಡುಗಿ' ನಾಟಕವಂತೂ ಕಂಪೆನಿಯ ತಿಜೋರಿ ತುಂಬಿಸಿತು. ಲೀಲಾ ನಾಯಕಿಯಾಗಿ ಮನೆ ಮಾತಾದರು. ಬೇರೆ ಬೇರೆ ಕಂಪೆನಿಗಳು ಬೇರೆ ಬೇರೆ ಹೆಸರುಗಳಲ್ಲಿ 'ಹಳ್ಳಿ ಹುಡುಗಿ' ಕಥೆಯನ್ನು ಆಧರಿಸಿ ನಾಟಕಗಳನ್ನು ಮಾಡಿದವು. ಆದರೆ, ಲೀಲಾ ಅಭಿನಯದ 'ಹಳ್ಳಿ ಹುಡುಗಿ' ಮಾತ್ರ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಪ್ರಸಿದ್ಧಳಾದಳು.

ಚಿಂದೋಡಿ ವೀರಪ್ಪನವರ ಕೆ.ಬಿ.ಆರ್. ಕಂಪೆನಿ ಪ್ರದರ್ಶಿಸುತ್ತಿದ್ದ 'ಗುಣಸಾಗರಿ', 'ಬಸವೇಶ್ವರ', 'ಶಾಕುಂತಲ', 'ಲಂಕಾದಹನ' ಹೀಗೆ ಹಲವಾರು ನಾಟಕಗಳಲ್ಲಿ ಲೀಲಾ ಅವರೇ ಪ್ರಧಾನ ಪಾತ್ರಗಳನ್ನು ವಹಿಸುತ್ತಿದ್ದರು. 'ಹಳ್ಳಿ ಹುಡುಗಿ'. 'ಗುಣಸಾಗರಿ' ನಾಟಕಗಳಲ್ಲಿ ಲೀಲಾ ನಾಯಕಿ. ಈ ನಾಟಕಗಳಂತೂ ಸಾವಿರ ಸಾವಿರ ಪ್ರದರ್ಶನಗಳನ್ನು ಕಂಡವು.

ವೃತ್ತಿ ನಾಟಕರಂಗದಲ್ಲಿ ಜನಪ್ರಿಯ ನಾಯಕಿಯಾಗಿದ್ದ ಲೀಲಾ ಅವರನ್ನು ಚಲನಚಿತ್ರ ಜಗತ್ತು ಆಹ್ವಾನಿಸಿತು. 'ಶ್ರೀ ಕೃಷ್ಣದೇವರಾಯ', 'ಕಿತ್ತೂರು ಚೆನ್ನಮ್ಮ', 'ಗಾಳಿಗೋಪುರ' ಹೀಗೆ ಹಲವಾರು ಚಿತ್ರಗಳಲ್ಲಿ ಅಭಿನಯಿಸಿದ ಅವರು ಮತ್ತೆ ರಂಗಭೂಮಿಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡರು. ಅಣ್ಣ ಚಿಂದೋಡಿ ವೀರಪ್ಪ ಕಾಲವಾದ ಬಳಿಕ ಕಂಪೆನಿಯನ್ನು ಮುನ್ನಡೆಸಿದರು. ಕೆ.ಬಿ.ಆರ್. ನಾಟಕ ಕಂಪೆನಿ ಚುಕ್ಕಾಣಿ ಹಿಡಿದ ಲೀಲಾ ಸಾಧಿಸಿದ ವಿಕ್ರಮಗಳು ಒಂದೆರಡಲ್ಲ. ಮಾಡಿದ ನಾಟಕಗಳು– ಅಭಿನಯಿಸಿದ ಪಾತ್ರಗಳನ್ನು ಜನಮೆಚ್ಚುವಂತೆ ಮಾಡಿದ್ದು ಅವರ ವೈಶಿಷ್ಟ್ಯವಾಗಿತ್ತು.

'ಜಾತಿಯ ಭೂತ', 'ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ', 'ಮಂಗಳ ನನ್ನ ಅತ್ತಿಗೆ', 'ನೀನು ಸಾಹುಕಾರನಾಗು', 'ಸಿಡಿದೆದ್ದ ಬಡವ', 'ಸೂಳೆ ಕಾಪಾಡಿದ ಸತ್ಯ' ಹೀಗೆ ಹತ್ತಾರು ನಾಟಕಗಳು ಅವರ ಮುಂದಾಳತ್ವದಲ್ಲಿ ಪ್ರದರ್ಶನಗೊಂಡವು. ಅವುಗಳಲ್ಲಿ ಬಹುತೇಕ ಎಲ್ಲವೂ ಸಮಕಾಲಿನ ಸಮಾಜದ ಅಂಕುಡೊಂಕುಗಳ ಮೇಲೆ ಬೆಳಕು ಚೆಲ್ಲುವಂತದ್ದಾಗಿದ್ದವು.

ಬೆಳಗಾವಿಯಲ್ಲಿ ಮರಾಠಿಗರ ಅಡ್ಡಿ ಆತಂಕಗಳ ನಡುವೆ ಕನ್ನಡ ನಾಟಕಗಳನ್ನು ಕೆ.ಬಿ.ಆರ್. ಕಂಪೆನಿ ಮೂಲಕ ವರ್ಷಗಟ್ಟಲೆ ನಡೆಸಿದ್ದು ಲೀಲಾ ಅವರ ಧೀಮಂತಿಕೆಗೆ ಸಾಕ್ಷಿ. ನಾಟಕಗಳಲ್ಲಿ ನಾಯಕಿಯಾಗಿ ಅಭಿನಯಿಸುತ್ತಿದ್ದ ಅವರು ಹೊರ ಜಗತ್ತಿನಲ್ಲಿ ಕನ್ನಡಿಗ ವಿರೋಧಿಗಳ ಕುಟೀಲ ತಂತ್ರಗಳನ್ನು ಮೆಟ್ಟಿ ನಿಂತರು. ನ್ಯಾಯಾಲಯಗಳ ಮೊರೆ ಹೋಗಿ ಜಯ ಸಾಧಿಸಿದ್ದು ಅವರ ಇನ್ನೊಂದು ಹೆಗ್ಗಳಿಕೆ.

ಹುಬ್ಬಳ್ಳಿ, ಬೆಳಗಾವಿ, ದಾವಣಗೆರೆಗಳಲ್ಲಿ ಮೊಕ್ಕಾಂ ಹೂಡಿ ಅನೇಕ ದಾಖಲೆಗಳಿಗೆ ಕಾರಣವಾದ ಲೀಲಾ ಒಡೆತನದ ಕೆ.ಬಿ.ಆರ್. ಕಂಪೆನಿ ಬೆಂಗಳೂರಿನಲ್ಲಿಯೂ ಅನೇಕ ಪ್ರಯೋಗಗಳನ್ನು ನಡೆಸಿ ವಿಕ್ರಮ ಸಾಧಿಸಿತು.

ಖಾನಾವಳಿ ಚೆನ್ನಿ, ಹಳ್ಳಿ ಹುಡುಗಿ, ಲಂಕಾದಹನದ ಸೀತೆ, ಬಸವೇಶ್ವರ ನಾಟಕದ ಕಲಾವತಿ ಹೀಗೆ ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡ ಲೀಲಾ ದ್ವಿಪಾತ್ರಗಳನ್ನು ನಿರ್ವಹಿಸಿದರು. ಅವರಿಗೆ ಪೊಲೀಸನ ಮಗಳು ಪಾತ್ರ ಸಾಕಷ್ಟು ಜನಪ್ರಿಯತೆ ತಂದುಕೊಟ್ಟಿತು. ಚಿಂದೋಡಿ ಲೀಲಾ ಅವರು ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿದರು. ಅಲ್ಲಿದ್ದಾಗ ತಾವು ಬದುಕಿದ ವೃತ್ತಿ ನಾಟಕ ರಂಗಕ್ಕೆ ಬೆಂಬಲ ನೀಡುವ ಕಾರ್ಯಕ್ರಮಗಳನ್ನು ರೂಪಿಸಿದರು.